ಅಷ್ಟರಲ್ಲಿ ಕನ್ನಡ ಗೊತ್ತಿರುವ ಅಧಿಕಾರಿಯೊಬ್ಬರು ಮಧ್ಯ ಪ್ರವೇಶಿಸಿದರು. "ಏನ್ರಿ ಇದು ವೋಟರ್ಸ್‌ಗೆ ಆಣೆ ಪ್ರಮಾಣ ಮಾಡಿಸಿ, ಓಟ್ ಹಾಕಿಸಲು ಹೊಸ ತಂತ್ರ ಮಾಡಿದ್ದೀರಿ. ಇಷ್ಟೊಂದು ಕವರು ಎಲ್ಲಿಗೆ ತಗೊಂಡು ಹೋಗ್ತಿದ್ದೀರಿ. ನಮಗೆಲ್ಲಾ ಈ ನವರಂಗಿ ನಾಟಕ ಗೊತ್ತಾಗಲ್ಲ ಅಂತ ತಿಳ್ಕಂಡಿದ್ದೀರಾ? ಗಾಡಿ ಸೀಝ್ ಮಾಡ್ತೀವಿ" ಎಂದು ರೋಪು ಜಡಿದರು. ನಾನು ಅಂತಿಮವಾಗಿ ಜಯಮ್ಮನರೇ ದಯಮಾಡಿ ಅಖಾಡಕ್ಕೆ ಧುಮುಕಬೇಕೆಂದು ಬಿನ್ನವಿಸಿಕೊಂಡೆ.

"ಏನ್ರಿ ಸಾಹೇಬ್ರೆ, ನಿಮಗೆ ದೇವ್ರು ದಿಂಡ್ರು ಅದಾರೋ ಇಲ್ವೋ? ದೇವರ ಹರಕೆ ತೀರಿಸೋಕೆ ಹೊಂಟ ಹೊತ್ತಲ್ಲೂ ಪಿರಿಪಿರಿ ಮಾಡ್ತೀರಲ್ಲ" ಎಂದು ಕಾರು ಇಳಿಯುತ್ತಲೇ ದನಿ ಏರಿಸಿಕೊಂಡು ಮುನ್ನುಗ್ಗಿದರು. "ಅಲ್ರಿ ಮೇಡಂ, ದೇವರ ಹರಕೆಗೆ ಇಷ್ಟೊಂದು ಪಟ್ಟ ಒಟ್ಟಿಗೆ ಕಟ್ಕೊಂಡು ಯಾರಾದ್ರೂ ಹೋಗ್ತಾರಾ? ಹಣ್ಣು, ಕಾಯಿ, ಹೂವ ದೇವಸ್ಥಾನದ ಹತ್ರಾನೆ ಕೊಂಡ್ಕೊಂಡು ದೇವರಿಗೆ ಒಪ್ಪುಸ್ತಾರೆ. ಈ ಕಳ್ಳಕತೆ ಬೇರೆ ಯಾರತ್ರನಾದ್ರೂ ಹೇಳಿ" ಎಂದು ಅಧಿಕಾರಿಯೂ ರಾಂಗಾದನು. ಜಯಮ್ಮನೂ ಒಪ್ಪಿಸುವ ಹಟಕ್ಕೆ ಬಿದ್ದರು. ಹೀಗೆ ಇಬ್ಬರ ನಡುವೆ ಅಮೋಘ ಮಾತಿನ ಯುದ್ಧವೇ ನಡೆದು ಹೋಯಿತು. ಕೊನೆಗೆ ಜಯಮ್ಮ ಅಧಿಕಾರಿಯನ್ನು ಅಂತಿಮವಾಗಿ ಸೋಲಿಸಿ ಹಾಕಿದ್ದರು.

"ಒಳ್ಳೆ ಕೆಲಸಕ್ಕೆ ಹೊಂಟ ನಮ್ಮನ್ನು ತಡೆದಿದ್ದೀಯ! ದೇವರ ಶಾಪ ನಿಂಗೂ ನಿನ್ನ ಹೆಂಡ್ತಿ ಮಕ್ಕಳಿಗೂ ತಟ್ಟೇ ತಟ್ಟುತ್ತೆ" ಎಂದು ಹೇಳಿದ್ದಕ್ಕೆ ಹೆದರಿ ಅಧಿಕಾರಿ ನಮ್ಮನ್ನು ಬಿಟ್ಟನೆಂದು ಜಯಮ್ಮ ಗತ್ತಿನಿಂದ ಹೇಳಿಕೊಂಡರು. ಮುಂದೆ ಮುಂದೆ ಹೋದಂತೆ ಹೀಗೆ ಮೂರು ರಸ್ತೆ ಕೂಡುವ ಜಾಗದಲ್ಲಿ ಕಾವಲಿಗಿದ್ದ ಪೊಲೀಸರ ಜೊತೆ ಮತ್ತೆ ಜಟಾಪಟಿ ಮಾಡುತ್ತಾ ಎಲ್ಲಾ ಹದಿನೈದು

